C.C.
14591/2024
P W-1

**ಸಾಕ್ಷಿಯನ್ನು ದಿನಾಂಕ 11.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ವಕೀಲರಿಂದಃ**

ಆರೋಪಿಗೆ ನಾನು ಐಟಂ ಕಳಿಸಿದೆ. ಅದರ ಬಾಬ್ತು ನನಗೆ ಚೆಕ್ ಕೊಟ್ಟಿದ್ದರು. ಅದರ ಬಾಬ್ತು ಈ ಪಿರ್ಯಾದಿಯನ್ನು ಹಾಕಿದ್ದೇನೆ. ಆರೋಪಿ ನನಗೆ ಪರಿಚಯ. ಆರೋಪಿ ತನ್ನನ್ನು ಚಿಂತಾಮಣಿ ಮಿನರ್ವ ಮೆಡಿಕಲ್ಸ್ ಅಳಿಯ, ನಾನು ಐಟಂಗಳನ್ನು ಖರೀದಿ ಮಾಡುತ್ತೇನೆ ಎಂದು ಪರಿಚಯ ಮಾಡಿಕೊಂಡಿರುತ್ತಾರೆ. ನಾನು ಪಿರ್ಯಾದಿಯ ಪಾರ್ಟನರ್ ಆಗಿ ಈ ಪಿರ್ಯಾದಿಯನ್ನು ಹಾಕಿದ್ದೇನೆ. ನಾನು ಪಿರ್ಯಾದಿಯ ಪಾರ್ಟನರ್ ಶಿಪ್ ಗೆ ಪಾರ್ಟನರ್ ಎಂದು ದಾಖಲೆ ಕೊಟ್ಟಿದ್ದೇನೆ. ನಮ್ಮದು ನೋಂದಣಿ ಪಾರ್ಟನರ್ ಶಿಪ್ ಆಗಿರುತ್ತದೆ. ನಾನು ಮೆಮೋದೊಂದಿಗೆ ಸದರಿ ಪಾರ್ಟನರ್ ಶಿಪ್ ಅನ್ನು ಕೊಟ್ಟಿದ್ದೇನೆ.

2. ಷಣ್ಮುಗಾನಂದ ನನ್ನ ಗಂಡ. ನಂಜುಂಡೇಶ್ವರ ಎಂಟರ್ ಪ್ರೈಸಸ್ ನಲ್ಲಿ ನನ್ನ ಗಂಡ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದರು, ನಾನು ಸ್ಟೇಷನರಿ ಅಂಗಡಿ ಇಟ್ಟುಕೊಂಡಿದ್ದೇನೆ. ನನ್ನ ಸ್ಟೇಷನರಿ ಅಂಗಡಿಯ ಹೆಸರು ನಂಜುಂಡೇಶ್ವರ ಸ್ಟೇಷನರಿ ಅಂಡ್ ಗಿಫ್ಟ್. ನಾನು ಈ ಪಿರ್ಯಾದಿಯನ್ನು ನಂಜುಂಡೇಶ್ವರ ಎಂಟರ್ ಪ್ರೈಸಸ್ ಕ್ಯಾಪಸಿಟಿಯಲ್ಲಿ ಹಾಕಿರುವುದು ಎಂದರೆ ಹೌದು ನಾನು ಮತ್ತು ನನ್ನ ಗಂಡ ಪಾರ್ಟನರ್ ಆಗಿದ್ದ ಕಾರಣ ಹಾಕಿಕೊಂಡಿದ್ದೇನೆ. ನನ್ನ ಗಂಡ ಮತ್ತು ಆರೋಪಿಯು ಪರಿಚಯಸ್ಥರು ಮತ್ತು ಸ್ನೇಹಿತರು ಎಂದರೆ ಹೌದು. ನಂಜುಂಡೇಶ್ವರ ಎಂಟರ್ ಪ್ರೈಸಸ್ ನಲ್ಲಿ ಲೆಡ್ಜರ್ ಪುಸ್ತಕವನ್ನು ಮತ್ತು ಬ್ಯಾಲೆನ್ಸ್ ಶೀಟ್ ಅನ್ನು ಮೇನ್ ಟೇನ್ ಮಾಡುತ್ತೇವೆ ಹಾಗೂ ಆದಾಯ ತರಿಗೆ ಯನ್ನು ಸಹ ಕಟ್ಟುತ್ತೇವೆ. ಆದಾಯ ತೆರಿಗೆಯನ್ನು ನನ್ನ ಗಂಡನ ಹೆಸರಿನಲ್ಲಿ ಕಟ್ಟುತ್ತಿದ್ದೇನೆ.

3. ಈ ಪಿರ್ಯಾದಿಯನ್ನು ನನ್ನ ಗಂಡ ಹಾಕಿರುವುದು ಎಂದರೆ ಹೌದು. ಈಗ ಅವರು ಮೃತಪಟ್ಟಿರುತ್ತಾರೆ. ನನ್ನ ಗಂಡ ಮಾಡುತ್ತಿದ್ದ ಟ್ರಾನ್ಸ್ ಸ್ಯಾಕ್ಷನ್ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂಬ ಪ್ರಶ್ನೆಗೆ ನನ್ನ ಗಂಡನಿಗೆ ಆರೋಗ್ಯ ಸರಿ ಇರದ ಕಾರಣ ಟ್ರಾನ್ಸ್ ಸ್ಯಾಕ್ಷನ್ ಆದಾಗ ನಾನು ಅವರ ಜೊತೆಯಲ್ಲಿಯೇ ಇದ್ದೆ. ವ್ಯವಹಾರ ಮಾಡಿರುವಂತಹ ಇನ್ ವಾಯ್ಸ್ ಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಎಷ್ಟು ಇತ್ತೋ ಅಷ್ಟು ಕೊಟ್ಟಿರುತ್ತೇನೆ. ಕಡತವನ್ನು ನೋಡಿ ಕೊಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

4. ನನ್ನ ಪಿರ್ಯಾದಿಯ ಕಂಡಿಕೆ-7ರಲ್ಲಿ ಆರೋಪಿ ನನ್ನ ಬಳಿ ಬಂದು ಐಟಂಗಳನ್ನು ತೆಗೆದುಕೊಂಡು ಹೋಗಿರುತ್ತಾರೆ ಎಂದು ಹೇಳಿದ್ದೇನೆ ಎಂದರೆ ಹೌದು. ಯಾವ ಯಾವ

ಐಟಂಗಳನ್ನು ಖರೀದಿ ಮಾಡಿರುತ್ತಾರೆ ಎಂದು ನನ್ನ ಪಿರ್ಯಾದಿಯಲ್ಲಿ ಪ್ರತ್ಯೇಕವಾಗಿ ಹೇಳಿಲ್ಲ ಎಂದು ನುಡಿದಿರುತ್ತಾರೆ.

**ಮುಂದುವರೆದ ಪಾಟೀಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

**2ನೇ ಎಎಸ್‌ಸಿಜೆ ಮತ್ತು ಎಸಿಜೆಎಂ,
ಬೆಂಗಳೂರು.**